ಜೆಎಸ್‌ಎಸ್ ಮಹಾವಿದ್ಯಾಪೀಠ

# ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು

ಭಾರತ ಸರ್ಕಾರದ ಡಿಬಿಟಿಯಿಂದ "ಸ್ಟಾರ್ ಕಾಲೇಜ್ ಸ್ಕೀಮ್" ಅಡಿಯಲ್ಲಿ ಗುರುತಿಸಲ್ಪಟ್ಟಿದೆ

(ಮೈಸೂರು ವಿಶ್ವವಿದ್ಯಾನಿಲಯದಿಂದ ಸ್ವಾಯತ್ತತೆ ಪಡೆದಿದೆ * ನ್ಯಾಕ್‌ನಿಂದ 'ಎ' ದರ್ಜೆ ಮಾನ್ಯತೆ ಪಡೆದಿದೆ)

ESTD - 1964

ಊಟಿರಸ್ತೆ, ಮೈಸೂರು-೫೭೦ ೦೨೫

☎ 0821-2548236 & 2548380 Fax: 0821-2548238 E-mail: jssautonomous@gmail.com


ದಿನಾಂಕ: 08-09-2014

**<u>ಪ್ರಕಟಣೆಯ ಕೃಪೆಗಾಗಿ</u>**

*ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು ಸಮುಚ್ಚಯ, ಊಟಿ ರಸ್ತೆ, ಮೈಸೂರು*

## ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ 99ನೇ ಜಯಂತಿ ಮಹೋತ್ಸವ

ಮೈಸೂರು, ಸೆ. 8 : ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಪದವಿ ಕಾಲೇಜು, ಜೆಎಸ್‌ಎಸ್ ಪದವಿಪೂರ್ವ ಕಾಲೇಜು ಮತ್ತು ಜೆಎಸ್‌ಎಸ್ ವಾಕ್ ಶ್ರವಣ ಸಂಸ್ಥೆ, ಊಟಿ ರಸ್ತೆ, ಮೈಸೂರು ಇವರುಗಳ ಸಂಯುಕ್ತ ಆಶ್ರಯದಲ್ಲಿ ಪರಮಪೂಜ್ಯ ಜಗದ್ಗುರು 'ರಾಜಗುರುತಿಲಕ' ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ 99ನೇ ಜಯಂತಿ ಮಹೋತ್ಸವವನ್ನು ಶ್ರದ್ಧಾಭಕ್ತಿಗಳಿಂದ ಕಾಲೇಜಿನ ಸಭಾಂಗಣದಲ್ಲಿ ನೆರವೇರಿಸಲಾಯಿತು.

ಸಮಾರಂಭದ ದಿವ್ಯ ಸಾನಿಧ್ಯವನ್ನು ವಹಿಸಿದ್ದ ಶ್ರೀ ಕುದೇರುಮಠದ ಶ್ರೀ ಗುರುಶಾಂತಸ್ವಾಮಿಗಳು ತಮ್ಮ ಆಶೀರ್ವಚನ ದಲ್ಲಿ ಅನೇಕ ಮಠಾಧೀಶ್ವರು ಜನಿಸಿದ ನಾಡಿನಲ್ಲಿ ನಾವು ಶ್ರೀಗಳ ಜಯಂತಿಯನ್ನು ಆಚರಿಸುತ್ತಿರುವುದು ಸರ್ವಶ್ರೇಷ್ಠ ಅರ್ಥಪೂರ್ಣವಾಗಿದೆ ಎಂದರು. ಅಜ್ಞಾನವೆಂಬ ಕಸವನ್ನು ಹೊರಹಾಕಿ, ಇವ ನಮ್ಮವ, ಇವ ನಮ್ಮವ ಎಂದು ಎಲ್ಲರನ್ನೂ ಒಂದೇ ರೀತಿಯಲ್ಲಿ ಕಾಣುವ ಗುಣ ಇವರಲ್ಲಿತ್ತು ಎಂದು ಅಂಬಿಗರ ಚೌಡಯ್ಯನವರ ವಚನ ಸಹಿತ ಉದಾಹರಿಸಿದರು. "ಪರೋಪಕಾರಾರ್ಥಂ ಇದಂ ಶರೀರಂ" ಎಂಬಂತೆ ಶ್ರೀ ರಾಜೇಂದ್ರ ಮಹಾಸ್ವಾಮಿಗಳು ತಮಗಾಗಿ ಬದುಕಿದವರಲ್ಲ, ಬೇರೆಯವರಿಗಾಗಿ, ಬಡಮಕ್ಕಳಿಗಾಗಿ, ಸಮಾಜದ ಏಳಿಗೆಗಾಗಿ ಬದುಕಿದವರು, ಮಾತೃ ಹೃದಯವುಳ್ಳವರು ಎಂದು ಅವರು ನಡೆಸಿದ ಜೀವನ, ಹಾಕಿಕೊಟ್ಟಿರುವ ಹೆಜ್ಜೆಯನ್ನು ನೆನೆದರು. ನಡೆದಾಡುವ ದೇವರಾದ ಶ್ರೀ ಸಿದ್ಧಗಂಗಶ್ರೀಯವರು "ಸಾವಿರಾರು ಮಕ್ಕಳಿಗೆ ವಿದ್ಯಾರ್ಜನೆ ಮಾಡಿಕೊಟ್ಟ" ಡಾ. ಶ್ರೀ ಶಿವರಾತ್ರಿರಾಜೇಂದ್ರ ಮಹಾಸ್ವಾಮಿಗಳನ್ನು ಅತ್ಯಂತ ಗೌರವದಿಂದ ಕಾಣುತ್ತಿದ್ದರು ಎಂದು ಹೇಳಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಡಾ. ಕೆ. ಪಿ. ಪುತ್ತುರಾಯರು ಮಾತನಾಡಿ, ಡಾ. ಶ್ರೀ ರಾಜೇಂದ್ರಮಹಾಸ್ವಾಮಿ ಗಳವರು ಯತಿಗಳಾಗಿ, ಮಠಾಧಿಪತಿಗಳಾಗಿ ಮತ್ತು ಧಾರ್ಮಿಕ ಗುರುಗಳಾಗಿ ಸಲ್ಲಿಸಿದ ಸೇವೆಯನ್ನು ಸ್ಮರಿಸಿದರು. ಸುಮ್ಮನೆ ಅವರನ್ನು ಹೊಗಳುವುದರಿಂದ ಜೀವನ ಸಾರ್ಥಕವಾಗುವುದಿಲ್ಲ, ಅವರ ಮೌಲ್ಯಗಳನ್ನು ಜೀವನದಲ್ಲಿ ನಾವೆಲ್ಲರೂ ಅಳವಡಿಸಿಕೊಳ್ಳಬೇಕು, ಅವರು ಸನ್ಯಾಸವನ್ನು ಹೇರಿಕೊಂಡವರಲ್ಲ, ಆರಿಸಿಕೊಂಡವರು. ಆಧ್ಯಾತ್ಮಿಕ ಕೇಂದ್ರ, ಸರ್ವಧರ್ಮ ಸಮನ್ವಯ ಹಾಗೂ ಧರ್ಮ ಪ್ರಚಾರಕರಾಗಿ ಅವರು ಸಲ್ಲಿಸಿದ ಗಣನೀಯ ಸೇವೆ ಅಪಾರವಾದದ್ದು ಎಂದು ನೆನೆದು, ಸಾಮಾಜದ ಉದ್ಧಾರಕ್ಕಾಗಿ ಅವರು ಸ್ಥಾಪಿಸಿದ ಪ್ರಸಾದ ನಿಲಯಗಳು, ಶಾಲಾಕಾಲೇಜುಗಳು, ಆಸ್ಪತ್ರೆಗಳು, ಅವರು ಸಲ್ಲಿಸಿದ ಇನ್ನಿತರ ಅನೇಕ ಕೊಡುಗೆಗಳನ್ನು ವಿವರಿಸಿದರು.